**ದಿನಾಂಕಃ 28-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ವಾದಿಪರ ಶ್ರೀ ಎಸ್.ಎಂ.ಪಿ ವಕೀಲರಿಂದಃ**

ನನ್ನ ಅಜ್ಜನ ಹೆಸರು ತೋಟಪ್ಪ ತಂದೆ ನಂದಪ್ಪ ಎಂದು ಇರುತ್ತದೆ. ಸರ್ವೆನಂ.527/ಆ ಜಮೀನು ನನ್ನ ಹೆಸರಿನಲ್ಲಿ ಇರುತ್ತದೆ ಎಂದರೆ ನಿಜ. ಸದರಿ ಜಮೀನು ಮೊದಲು ಅಂದರೆ 1954-55 ರಲ್ಲಿ ಬಸಪ್ಪ ತಂದೆ ತೋಟಪ್ಪ ಏವೂರು ಈತನ ಹೆಸರಿನಲ್ಲಿ ಇತ್ತು. ಸಾಕ್ಷಿ ಮುಂದುವರೆದು ಸದರಿಯವನು ಮಲ್ಲಪ್ಪನಿಂದ ಯಾಳಗಿಯಿಂದ ಖರೀದಿಸಿರುತ್ತಾನೆ ಎಂದು ನುಡಿಯುತ್ತಾರೆ. ಸದರಿ ಬಸಪ್ಪನು ಮಲ್ಲಪ್ಪನಿಂದ ಖರೀದಿ ಮಾಡಿದ್ದ ಎಂದು ತೋರಿಸಲು ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. 1954-55 ರಲ್ಲಿ ಮಲ್ಲಪ್ಪನಿಂದ ಬಸಪ್ಪನ ಹೆಸರಿನಲ್ಲಿ ವರ್ಗಾವಣೆಯಾದ ಮುಟೇಷನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಬಸಪ್ಪನಿಂದ ನನ್ನ ತಂದೆ ನಂದಪ್ಪನಿಗೆ ಆದ ವರ್ಗಾವಣೆಯಾದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸರ್ವೆ ನಂ.527/ಆ ಜಮೀನಿನ ನಂಬರ ಬದಲಾವಣೆಯಾಗಿ ಈಗ ಸರ್ವೆ ನಂ.527/2 ಎಂದು ಆಗಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನನ್ನ ಹೊಲ ಕಡಿಮೆ ಆಗಿದೆ ಅದನ್ನು ಹೆಚ್ಚು ಮಾಡಬೇಕೆಂದು ನಾನು ಸರ್ವೆ ಮಾಡಲು ಅರ್ಜಿ ಸಲ್ಲಿಸಿರುವುದಿಲ್ಲ. ನಾನು ತಹಶೀಲ್ದಾರ ಇವರಿಗೆ ಕೊಟ್ಟ ಅರ್ಜಿಯಲ್ಲಿ ಜಮೀನು ಸರ್ವೆ ನಂ.527/2 ಅಂತ ನಮೂದಿಸಲಾಗಿದೆ ಎಂದರೆ ಸರಿಯಲ್ಲ.

**02.** 1978-79 ರ ಪಹಣಿಯಲ್ಲಿ ಸರ್ವೆ ನಂ.527/ಆ ಜಮೀನು ನನ್ನ ತಂದೆಯಾದ ನಂದಪ್ಪ ತಂದೆ ತೋಟಪ್ಪ ಈತನ ಹೆಸರಿನಲ್ಲಿ ನಮೂದು ಇದೆ ಎಂದರೆ ಸರಿ. ನಂತರ 1983-84 ರಲ್ಲಿ ನಂದಪ್ಪ ತಂದೆ ತೋಟಪ್ಪ ತೀರಿಕೊಂಡ ಸರ್ವೆ ನಂ.527/2 ಜಮೀನಿಗೆ ನನ್ನ ಅಣ್ಣ-ತಮ್ಮಂದಿರಾದ ಮಡಿಮಾಳಪ್ಪ, ಬಸಪ್ಪ ಮತ್ತು ತೋಟಪ್ಪ ಇವರ ಹೆಸರು ದಾಖಲಾಗಿದೆ ಎಂದರೆ ಸರಿ. ಸನ್ 1988-89 ರಲ್ಲಿ ಸದರಿ ಜಮೀನು ನಮ್ಮ ಮೂರು ಜನರ ಹೆಸರಿನಲ್ಲಿ ದಾಖಲಾಗಿದೆ

ಎಂದರೆ ಸರಿ. ಸನ್ 1993-94 ರಲ್ಲಿ ಸದರಿ ಜಮೀನನಲ್ಲಿ ತಲಾ ಮೂರು ಜನರಿಗೆ ತಲಾ 03 ಎಕರೆ 29 ಗುಂಟೆಯನ್ನು ದಾಖಲಾಗಿರುತ್ತದೆ ಎಂದರೆ ಸರಿ. ಸಂಗಮ್ಮ ಗಂಡ ನಿಂಗನಗೌಡ ಹೊಸಮನಿ ಇವರು ಏನು ಸಂಬಂಧಿಕರು ಇರುವುದಿಲ್ಲ, ಆದರೆ ಸದರಿಯವರಿಗೆ ನಾವು ನಮ್ಮ ಆಸ್ತಿಯನ್ನು 1990 ರಲ್ಲಿ ಒತ್ತಿ ಹಾಕಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಸಂಗಮ್ಮಳಿಗೆ ನಾನು ಮತ್ತು ಮಾಡಿವಾಳಪ್ಪ ಇಬ್ಬರೂ ಸೇರಿ ಒತ್ತಿ ಪತ್ರ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದೂ ಮೂರು ಜನ ಸೇರಿ ಮಾಡಿಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಸದರಿಯವಳಿಗೆ 03 ಎಕರೆ 28 ಗುಂಟೆ ಮುತ್ತ 03 ಎಕರೆ 29 ಗುಂಟೆ ಜಮೀನನ್ನು ಒತ್ತಿ ಹಾಕಿರುತ್ತೀರಾ ಎಂದರೆ ಸಾಕ್ಷಿಯು ಪೂರ್ಣ ಜಮೀನನ್ನು ಒತ್ತಿ ಹಾಕಿರುತ್ತೇವೆ ಎಂದು ನುಡಿಯುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ಮುಟೇಷನ ನಂ.72 ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಮುಟೇಷನ ಪ್ರಕಾರ ನಾನು ಮತ್ತು ಮಡಿವಾಳಪ್ಪ ಒತ್ತಿ ಹಾಕಿದ ಜಮೀನನ್ನು ಬಿಡಿಸಿಕೊಳ್ಳದ ಕಾರಣ ಸದರಿ ಸಂಗಮ್ಮಳ ಹೆಸರಿನಲ್ಲಿ ಜಮೀನು ಆಗಿರುತ್ತದೆ ಅಂದರೆ ಸಾಕ್ಷಿಯು ಹಾಗೆ ಬರೆಯಲಾಗಿದೆ ಎಂದು ನುಡಿಯುತ್ತಾರೆ. ಆದ್ದರಿಂದ ಸದರಿ 05 ಕೈಬಹರ ಪಹಣಿಗಳ ದೃಡೀಕೃತ ದಾಖಲೆಗಳನ್ನು ಮತು ಮುಟೇಷನ ನಂ.76 ನ್ನು ಮುಖಾಬಿಲೆಯಾಗಿ ನಿಪಿ-11 ರಿಂದ 16 ಎಂದು ಗುರುತಿಸಲಾಯಿತು.

**03.** ಒತ್ತಿ ಪತ್ರದ ಪ್ರಕಾರ ನಾವು ಜಮೀನನ್ನು ಬಿಡಿಸಿಕೊಳ್ಳದೇ ಇರುವುದರಿಂದ 07 ಎಕರೆ ಜಮೀನು ಸಂಗಮ್ಮಳ ಹೆಸರಿನಲ್ಲಿ ಆಗಿದೆ ಎಂದರೆ ಸರಿ. ಸಂಗಮ್ಮಳಿಗೆ ಒತ್ತಿ ಹಾಕಿದ ಬಗ್ಗೆ ಮತ್ತು ಅದನ್ನು ರದ್ದುಪಡಿಸುವ ಬಗ್ಗೆ ನನ್ನ ಅರ್ಜಿಯಲ್ಲಿ ಬರೆದಿರುವುದಿಲ್ಲ. ನಾನು ಅರ್ಜಿಕೊಟ್ಟ ಪ್ರಕಾರ ನನ್ನ ಜಮೀನು ಸರ್ವೆ ನಂ.527/2 ಇರುತ್ತದೆ ಎಂದರೆ ಸರಿ. ಅದೇ ರೀತಿ ವಾದಿಯ ಮಾವನ ಜಮೀನು ಸರ್ವೆ ನಂ.527/1 ಇರುತ್ತದೆ ಎಂದೆರ ಸರಿಯಲ್ಲ. ವಾದಿಯ ಮಾವನದು ಸರ್ವೆ ನಂ.527/1

ಮತ್ತು ನನ್ನದು ಸರ್ವೆ ನಂ.527/2 ಜಮೀನು ಇರುತ್ತವೆ ಎಂದು ಸರ್ವೇ ಮಾಡಿಸಿರುವುದಿಲ್ಲ. ಸರ್ವೆ ಮಾಡಲಾರದೇ ತಹಶೀಲ್ದಾರ ಆದೇಶ ಹೊರಡಿಸಿರುತ್ತಾರಾ? ಎಂದರೆ ಸಾಕ್ಷಿ ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ-4 ತಹಶೀಲ್ದಾರ ಇವರಿಗೆ ಸಲ್ಲಿಸಿದ ಅರ್ಜಿ ಸರಿ ಇರುತ್ತದೆ. ನಿಡಿ-4 ರಲ್ಲಿ ಕಾಲಂನಲ್ಲಿ ಯಾರ ಯಾರಿಗೆ ಯಾವ ಸರ್ವೆ ನಂಬರ ಮತ್ತು ಎಷ್ಟು ಎಕರೆ ಎಂದು ನಮೂದಿಸಿರುವುದು ಸರಿ ಇರುತ್ತದೆ. ಸರ್ವೆ ನಂ.527/2 ನನ್ನ ಪ್ರಕಾರ 14 ಎಕರೆ 08 ಗುಂಟೆ ಜಮೀನು ಇರುತ್ತದೆ. ಸದರಿ ಜಮೀನಿನಲ್ಲಿ 03 ಎಕರೆ 28 ಗುಂಟೆ ಮತ್ತು 03 ಎಕರೆ 29 ಗುಂಟೆ ಸಂಗಮ್ಮಳಿಗೆ ಕೊಟ್ಟ ನಂತರ ನನಗೆ ಕೇವಲ 03 ಎಕರೆ ಉಳಿಯುತ್ತದೆ ಎಂದರೆ ಸರಿಯಲ್ಲ. ಪಹಣಿಯಲ್ಲಿ ತಪ್ಪು ನಮೂದು ಆಗಿರುವುದರ ಲಾಭ ಪಡೆಯಲು ಕರೋನಾ ಸಮಯದಲ್ಲಿ ನಾನು ತಹಶೀಲ್ದಾರವರಿಗೆ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಹೊಲವನ್ನು ಸಂಗಮ್ಮಳಿಗೆ ಹಣ ಕೊಟ್ಟು ಬಿಡಿಸಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಮತ್ತು ಮಡಿವಾಳಪ್ಪ ಇಬ್ಬರೂ 03 ಎಕರೆ 28 ಗುಂಟೆ ಮತ್ತು 03 ಎಕಟೆ 29 ಗುಂಟೆ ಜಮೀನಿನ ಸಂಗಮ್ಮಳಿಗೆ ಕೊಟ್ಟ ನಂತರ ಎಂದೂ ಕಬ್ಜ ಇಲ್ಲ ಎಂದರೆ ಸರಿಯಲ್ಲ. ನಾನು ಕಬ್ಜಯಲ್ಲಿ ಇರದೇ, ವಾದಿಯರ ಜಮೀನು ನಮ್ಮ ಜಮೀನಿನ ಪಕ್ಕದಲ್ಲಿ ಇರುವುರಿಂದ ಮತ್ತು ಕರೋನಾ ಸಮಯದಲ್ಲಿ ತಹಶೀಲ್ದಾರ ಕಚೇರಿಯಲ್ಲಿ ಅರ್ಜಿ ಕೊಟ್ಟು ನಮ್ಮ ಹೆಸರಿನಲ್ಲಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

**04.** 14 ಎಕರೆ 08 ಗುಂಟೆ ಜಮೀನಿನಲ್ಲಿ ಕಡಿಮೆಯಾಗಿದೆ ಅಂತ ಯಾವಾಗ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿಯು ನಾನು 10 ವರ್ಷಗಳ ಕಾಲ ಊರಿನಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನನ್ನು ಸಂಗಮ್ಮಳಿಗೆ ಕೊಟ್ಟಿದ್ದರಿಂದ ನಾನು ಊರಲ್ಲಿ ಇರಲಿಲ್ಲ ಮತ್ತು ಕಬ್ಜದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಅವರ ಭಾವ ವಾಟಣಿ ಪತ್ರ ಮಾಡಿಕೊಂಡ

ನಂತರ ವಾದಿಗೆ 09 ಎಕರೆ ಜಮೀನು ಬಂದಿರುತ್ತದೆ ಎಂದರೆ ನನಗೆ ಗೊತ್ತಿರವುದಿಲ್ಲ.

**05.** ಬಸವರಾಜ ತಂದೆ ನಂದಪ್ಪ ನನ್ನ ಸಹೋದರನಾಗಬೇಕು. ಸದರಿ ಮೇಲೆ ಹೇಳಿದ ವಾಟಣಿ ಪತ್ರಕ್ಕೆ ನನ್ನ ಸಹೋದರ ಬಸವರಾಜ ಸಾಕ್ಷಿ ಅಂತ ಸಹಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ವಾದಿಯ ಭಾವನ ಹೊಲ 17 ಎಕರೆ ಇತ್ತು. ಸದರಿಯವರು ಬೇರೆಯಾದ ನಂತರ ವಾದಿಗೆ 09 ಎಕರೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ 09 ಎಕರೆ ಜಮೀನಿನಲ್ಲಿ 04 ಎಕರೆ ವಾದಿಯು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಯಾವುದೇ ವಿಷಯ ಗೊತ್ತಿಲ್ಲದಿದ್ದರೂ ನಿಡಿ-4 ರಲ್ಲಿ ಇರುವ ಸಂಗತಿಗಳನ್ನು ಹೇಗೆ ಬರೆಸಿರುತ್ತೀಯಾ ಎಂದರೆ ಸಾಕ್ಷಿ ಸದರಿ ಸಂಗತಿ ನನಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ನಾನು ತಹಶೀಲ್ದಾರವರಿಗೆ ಕೊಟ್ಟ ಅರ್ಜಿಯಲ್ಲಿ ಬರೆದಿರುವ ಮಾಹಿತಿ ನನಗೆ ಇರುತ್ತದೆ. ಸದರಿ ಅರ್ಜಿಯಲ್ಲಿ ನಾನು, ಮಡಿವಾಳಪ್ಪ ಒತ್ತಿ ಹಾಕಿದ ವಿಷಯ ಅದರಲ್ಲಿ ಬರೆಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸಂಗಮ್ಮಳ ಹೆಸರಿನಲ್ಲಿ ಜಮೀನು ಆಗಿರುವ ವಿಷಯವನ್ನು ಮರೆಮಾಚಿ ವಾದಿಯ ನಮ್ಮ ಜಮೀನನ್ನು ಒತ್ತುವರಿ ಮಾಡಿರುತ್ತಾಳೆ ನಮ್ಮ ಜಮೀನನ್ನು ಹೆಚ್ಚು ಮಾಡಬೇಕೆಂದು ಅರ್ಜಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**06.** ನಿಡಿ-4 ರಲ್ಲಿ ಆದ ಸರ್ವೆ ವರದಿ ತಪ್ಪು ಇರುತ್ತದೆ ಎಂದರೆ ಸರಿಯಲ್ಲ. ನಾನು ಯಾವತ್ತೂ ಸರ್ವೆ ನಂ.527/2 ಹಾಗೂ 527/1 ರಲ್ಲಿ ಕಬ್ಜ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ಜಮೀನನ್ನು ನಾವು ವಾದಿಗೆ ಗೊತ್ತಿಲ್ಲದೇ ಸರ್ವೇ ಮಾಡಿಸಿಕೊಂಡು ಹೆಚ್ಚು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿ 1954 ರಿಂದ ಇಲ್ಲಿಯವರೆಗೂ 04 ಎಕರೆ 34 ಗುಂಟೆ ಕಬ್ಜದಲ್ಲಿ ಇರುತ್ತಾಳೆ ಎಂದರೆ ಸರಿಯಲ್ಲ. ವಾದಿಯ ಭಾವನಾದ ಸಾಯಬಣ್ಣ ತಂದೆ ನಿಂಗಪ್ಪ ಈತನು 17 ಎಕರೆ ಜಮೀನಿಗೆ ಹಾಗೂ ನನ್ನ ತಂದೆಯಾದ ನಂದಪ್ಪ ತಂದೆ ತೋಟಪ್ಪ ಈತನು 11 ಎಕರೆಗೆ ಮಾಲೀಕ ಇದ್ದ ಎಂದರೆ ಸರಿಯಲ್ಲ. ವಾದಿಗೆ ಗಂಡ ತೀರಿಕೊಂಡು ಒಬ್ಬಳೇ ಹೆಣ್ಣುಮಗಳು

ಇರುದನ್ನು ದುರುಪಯೋಗ ಪಡಿಸಿಕೊಂಡು ನಾನು ದಾಖಲೆ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
**ಶೋರಾಪುರ.**